ಟ್ಯಾಕ್ಸಿ ಓಡಿಸುವ ಹುಡುಗರನ್ನು ಮದುವೆಯಾಗಲು ಹುಡುಗೀರು ಯಾಕೆ ಹಿಂದುಮುಂದು ನೋಡುತ್ತಾರೆಂಬುದು ಮದುವೆಗೆ ನಿಂತ ಹುಡುಗರಿಗೆ ದೊಡ್ಡ ಪ್ರಶ್ನೆಯಾಗಿ ಕಾಡುತ್ತಿತ್ತು. ಅದೇ ಪ್ರಶ್ನೆ ತಂಗ್ಯನನ್ನು ಕಾಡುತ್ತಿತ್ತು.

''ಬೇಸಾಯ ಮಾಡೊ ಹುಡುಗುನ್ನ ನಮ್ಮುಡ್ಗಿ ಮದ್ವೆ ಆಗಲ್ಲ ಅಂತಾಳೆ. ಯಾಕಂದ್ರೆ ಅವ್ರತ್ರ ಪೌಡ್ರು, ಸೋಪು ತಂದ್ಕೊಡೋಕೂ ಒಂದೊಂದ್ ಸಾರಿ ದುಡ್ಡಿರಲ್ಲ.''

''ನಮ್ಮಮ್ಮಯ್ಯ ಮಾಳಿಗೆ ಮನೆಗೆ, ಹೆಂಚಿನ ಮನೆಗೆ ಮದ್ವೆಯಾಗಿ ಹೋಗಲ್ಲ ಅಂತಾಳೆ. ತಾರಸಿ ಮನೆ ಆದ್ರೆ ಸಾಕು ಹುಡ್ಗ ಯಂಗಿದ್ರೂ ಪರ್ವಾಗಿಲ್ಲ.''

''ನಮ್ಮುಡ್ಗಿಗೆ ರುಬ್ಬೋ ಗುಂಡಲ್ಲಿ ಖಾರಗೀರ ಅರೆಯೋಕೆ ಆಗಲ್ಲ. ಇಡ್ಲಿ ಅಂದ್ರೆ ಪ್ರಾಣ. ಒಳ್ಳೆ ಮಿಕ್ಸಿ ಇದ್ರೇನೆ ಅವಳ ಕೈಕಾಲು ಸಲುವಾಗಿ ಆಡೋದು. ಮದ್ವೆ ಮಾಡ್ಕೊಂಡೋಗಿ ಆಮ್ಯಾಕೆ ರುಬ್ಬೋ ಗಂಡುಗೆ ಅದುಮ್ಬಿಟ್ಟೀರ.''

''ನಮ್ಮುಡ್ಗಿ ಅತ್ತೆ, ನಾದ್ನೀರು ಇರೋ ಮನೆ ಬಿಲ್ಕುಲ್ ಬೇಡ ಅಂತಾಳೆ. ಒಳ್ಳೆ ಮಲ್ಲಿಗೆ ಬಳ್ಳಿ ಬೆಳೆಸಿದಂಗೆ ಬೆಳೆಸಿದ್ದೀವಿ ನಮ್ಮುಡ್ಗೀನ.''

''ನಮ್ಮುಡ್ಗಿ ಮದುವೆ ಆಗೋ ಮನೇಲಿ ನಲ್ಲಿ ಸೌಕರ್ಯ ಇರ್ಬೇಕು. ವಾಷಿಂಗ್ ಮೆಷಿನ್, ನೆಲ ಒರ್ಸೋ ಮೆಷಿನ್ ಇರ್ಬೇಕು. ನಮ್ಮನೇಲಿ ಒಂದಿನ ನೆಲ ಒರೆಸಿದೋಳಲ್ಲ, ಬಟ್ಟೆ ಒಗ್ಕೊಂಡ್ ಬಂದೋಳಲ್ಲ. ರೇಶ್ಮೆ ಹುಳನ ಸಾಕ್ದಂಗೆ ಸಾಕಿದ್ದೀವಿ ಗೊತ್ತೇನು.'' ಮುಂತಾಗಿ ಹೆಣ್ಣು ನೋಡಲು ಹೋದಾಗಲೆಲ್ಲ ಕೇಳಿ ಬರುತ್ತಿದ್ದ ಮಾತುಗಳನ್ನು ಕೇಳಿ ತಂಗ್ಯನಿಗೆ ಬೇಸರವಾದರೂ ಗಂಡಸು ಅಂದ ಮೇಲೆ ಒಂದು ಮದುವೆ, ಒಂದು ಸಂಸಾರ, ಒಂದು ವಂಶ ಇಲ್ಲದಿದ್ದರೆ ಹೆಂಗೆ ಎಂದು ಎಲ್ಲಾದರೂ ಹೆಣ್ಣಿದೆ ಎಂದು ಯಾರಾದರೂ ಹೇಳಿದರೆ ದೊಡ್ಮನೆ ಕುಂಟ್ಯಾಲ್ ದೊಡ್ಡಯ್ಯನನ್ನು, ''ಅದೂ ಒಂದಪ ನೋಡ್ಕಂಡು ಬರೋಣ ನಡಿ ದೊಡ್ಡಪ್ಪ.'' ಎಂದು ಅರ್ಜೆಂಟಿಗಲ್ಲದಿದ್ದರೂ ನಿಧಾನಕ್ಕೆ ಹೊರಡಿಸುತ್ತಿದ್ದ. ಹಿಂದೆ ಕುಂಟ್ಯಾಲ್ ದೊಡ್ಡಯ್ಯ ಒಂದೆರಡು ವಿಸಿಟ್‌ನಲ್ಲಿ ಗಂಡುಗಳಿಗೆ ಹೆಣ್ಣು ಮತ್ತು ಹೆಣ್ಣುಗಳಿಗೆ ಗಂಡೂ ಸೆಟ್ ಮಾಡಿಸುತ್ತಿದ್ದ. ಈಗ ಯಾರಾದರೂ ಆ ಬಗ್ಗೆ ಮಾತೆತ್ತಿದರೆ, ''ಅಯ್ಯೋ ಹೋಗಪ್ಪಯ್ಯ ಅತ್ತ ಯಾಸಟ್ಗೆ, ಒಂದು ಜೋಡಿ ಗಂಡು ಹೆಣ್ಣು ರೆಡಿ ಮಾಡೋಕೆ ಏಳ್ ಕೆರೆ ನೀರು ಕುಡಿಬೇಕಾಗ್ತೈತೆ. ಅದೆಂತವೋ ಕಿತ್ತೋದ್ ಮೊಬೈಲ್ ಫೋನ್ ಬಂದು ಹಳ್ಳಿ ಹುಡುಗ್ರು, ಹುಡಿಗಿರು ಚೆಂಗ್ಲ್ ಬಿದ್ದೋಗೆವೆ.'' ಎಂದು ಬೀಡಿಯನ್ನು ಪುಸಪುಸ ಊದಿ ಊದುರ ಬಿಡುತ್ತಾ ನಗುತ್ತಾನೆ. ದೊಡ್ಡಯ್ಯ ಇತ್ತೀಚೆಗೆ ಯಾವುದೋ ಹುಡುಗಿಯನ್ನು ನೋಡಲು ಹೋದಾಗ, ಹುಡುಗಿ ಕಡೆಯವರು ವಾಷಿಂಗ್ ಮೆಷಿನ್ ಸುದ್ದಿ ಎತ್ತಿದಾಗ. ''ಸರಿ ಹುಡುಗುನ್ ಮನೇಲಿ ವಾಷಿಂಗ್ ಮೆಷಿನ್, ಮಿಕ್ಸಿ ಎಲ್ಲಾ ಐತೆ ಅಂತ ಇಟ್ಕಳ್ಳಿ. ಎಲ್ಲಾ ಇದ್ದು ಹುಡುಗ್ನ್ ಮೆಷಿನ್ನೇ ಕೆಲ್ಸ ಮಾಡ್ದಿದ್ರೆ ಏನ್ಮಾಡ್ತೀರ.'' ಎಂದು ರೇಗಿ ಟವಲ್ ಕೊಡವಿಕೊಂಡು ಅದೇ ಎದ್ದು ಬಂದಿದ್ದ.

ಅದೇ ಕುಂಟ್ಯಾಲ್ ದೊಡ್ಡಯ್ಯನೇ ಇವೊತ್ತು ಕೂಡಾ ತಂಗ್ಯನ ಮನೆಗೆ ಹೆಣ್ಣಿನ ಕಡೆಯವರನ್ನು ಕರೆಸುತ್ತಿದ್ದದ್ದು. ಅವರು ದೊಡ್ಡಯ್ಯನ ಹೆಂಡತಿ ಕಡೆಯ ದೂರ ಸಂಬಂಧಿಕರು ಕೂಡಾ ಆಗಿದ್ದರು. ಹೇಳಿದಂತೆ ಅವರು ಎಸ್.ಎನ್. ಬಸ್ಸಿನಲ್ಲಿ ಬಂದು, ಸಂಕಾಪುರದ ಕ್ರಾಸಿನಲ್ಲಿ ಬಂದಿಳಿದಿದ್ದರು. ಕುಂಟ್ಯಾಲ್ ದೊಡ್ಡಯ್ಯ ಖುದ್ದಾಗಿ ಕ್ರಾಸಿಗೆ ತಾನೇ ಹೋಗಿ ಕರೆದುಕೊಂಡು ಬಂದಿದ್ದ. ಹುಡುಗ, ಮನೆ ಎರಡೂ ಹೆಣ್ಣಿನ ಕಡೆಯವರಿಗೆ ಹಿಡಿಸಿದ್ದವು. ತಲಾ ಐದೈದು ಕರ್ಗಡ್ಬು ತಿಂದು, ಒಬ್ಬಟ್ಟು ಸಾರಿನಲ್ಲಿ ಒಂದೊಂದು ಪ್ಲೇಟು ಅನ್ನ ತಿಂದು ಹೆಣ್ಣಿನ ಕಡೆಯವರು ಸಂಪ್ರೀತಗೊಂಡರು. ತಂದಿದ್ದ ಹುಡುಗಿಯ ಫೋಟೊವನ್ನು ದೊಡ್ಡಯ್ಯನ ಕೈಗೆ ಕೊಟ್ಟಿದ್ದರು. ದೊಡ್ಡಯ್ಯ ಒಂದು ನಿಮಿಷ ನೋಡಿ ಮುದ್ದನುಮಕ್ಕನ ಕೈಗೆ ಕೊಟ್ಟಿದ್ದ. ಮುದ್ದನುಮಕ್ಕ ಕಣ್ತುಂಬಿಸಿಕೊಂಡು ಗಂಡ ರಂಗಶ್ಯಾಮಣ್ಣನಿಗೆ